**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ದಾಂಡೇಲಿ**

**ಸಿ.ಸಿ ನಂಃ 671/2021**

**ಪಿರ್ಯಾದಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ದಾಂಡೇಲಿ ವಲಯ**

**-ವಿರುದ್ಧ-**

**ಆರೋಪಿತರು :** **ಭರಮಾನಿ ಶಹಾಪೂರಕರ**
ವಯಸ್ಸು: 39 ವರ್ಷ, ಉದ್ಯೋಗ : ಚಾಲಕ,
ಸಾಃ #102/ಬೀದರಬಾವಿ, ತಾಃ ಖಾನಾಪುರ, ಬೆಳಗಾವಿ ಜಿಲ್ಲೆ

**ದೋಷಾರೋಪಣೆ**

ನಾನು **ಶ್ರೀಮತಿ.ರೋಹಿಣಿ ಡಿ ಬಸಾಪುರ** ಪ್ರ.ದ.ನ್ಯಾ.ದಂಡಾಧಿಕಾರಿಗಳು, ದಾಂಡೇಲಿ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕ 23-11-2019 ರಂದು ಮದ್ಯಾಹ್ನ 12-00 ಗಂಟೆಗೆ ದಾಂಡೇಲಿ ವಲಯ ಅನಮೋಡ ತನಿಖಾ ಠಾಣಾ ಸರಹದ್ದಿನಲ್ಲಿ ಗೋವಾ ರಾಜ್ಯ ಕಡೆಯಿಂದ ರಾಮನಗರ ಕಡೆಗೆ ಆರೋಪಿಯಾದ ನೀವು ಟಾಟಾ ಎಸಸ್ ವಾಹನ ಸಂಖ್ಯೆ ಕೆಎ25-ಸಿ 2917 ರ ವಾಹನದ ಹಿಂಭಾಗದಲ್ಲಿ ಎರಡು ಗೋಣಿ ಚೀಲಗಳಲ್ಲಿ ಒಟ್ಟೂ ನಾಲ್ಕು ರಟ್ಟಿನ ಪೆಟ್ಟಿಗೆಗಳಲ್ಲಿ 24 ಮದ್ಯದ ಬಾಟಲಿಗಳು-ಒಟ್ಟೂ 18.00 ಲೀಟರ್ ಹಾಗೂ 24.00 ಲೀಟರ್ ಬೀಯರ್ ಬಾಟಲಿಗಳು ಗೋವಾ ರಾಜ್ಯದಲ್ಲಿ ಮಾರಾಟಕ್ಕೆ ಮಾತ್ರ ಎಂದು ನಮೂದಿಸಿದ ಮದ್ಯವನ್ನು ಯಾವುದೇ ರೀತಿಯ ಅಧಿಕೃತ ಪಾಸ್ ಯಾ ಪರ್ಮಿಟ್ ಇಲ್ಲದೇ ಅಕ್ರಮವಾಗಿ ಸಾಗಾಟ ಮಾಡುವ ಮೂಲಕ ಕರ್ನಾಟಕ

ಅಬಕಾರಿ ಕಾಯಿದೆ ಕಲಂ 32(1) ನೇದರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ನನ್ನ ಸಂಜ್ಞಾದೊಳಗೆ ಎಸಗಿರುವಿರೆಂದು,

ಎರಡನೇಯದಾಗಿ, ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಟಾಟಾ ಎಸಸ್ ವಾಹನ ಸಂಖ್ಯೆ ಕೆಎ25-ಸಿ 2917 ರ ವಾಹನದ ಹಿಂಭಾಗದಲ್ಲಿ ಎರಡು ಗೋಣಿ ಚೀಲಗಳಲ್ಲಿ ಒಟ್ಟೂ ನಾಲ್ಕು ರಟ್ಟಿನ ಪೆಟ್ಟಿಗೆಗಳಲ್ಲಿ 24 ಮಧ್ಯದ ಬಾಟಲಿಗಳು (ಒಟ್ಟೂ 18.00 ಲೀಟರ್) ಹಾಗೂ 24.00 ಲೀಟರ್ ಬೀಯರ್ ಬಾಟಲಿಗಳು ಗೋವಾ ರಾಜ್ಯದಲ್ಲಿ ಮಾರಾಟಕ್ಕೆ ಮಾತ್ರ ಎಂದು ನಮೂದಿಸಿದ ಮಧ್ಯವನ್ನು ಇಟ್ಟುಕೊಂಡು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುವ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 38(ಎ) ನೇದರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧ ಮಾಡಿರುವಿರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಈ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

ದಿನಾಂಕಃ 29-05-2024

ಪ್ರ.ದ.ನ್ಯಾ.ದಂಡಾಧಿಕಾರಿಗಳು, ದಾಂಡೇಲಿ